ಶ್ರೀ ವಾಟಾಳ್‌ನಾಗರಾಜ್ : ಇದು ತೀರಾ ಮೂಢನಂಬಿಕೆ. ಇದು ಹೋಗಬೇಕು.

ಅಧ್ಯಕ್ಷರು : ಅಧಿಕಾರ ಹೋದರೂ ಚಿಂತೆಯಿಲ್ಲ ನಾನು ಬರುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಚಾಮರಾಜನಗರದಿಂದ ಜನರು ಚುನಾವಣೆಯಲ್ಲಿ ನನ್ನನ್ನು ಎರಡನೆಯ ಸಾರಿ ಗೆಲ್ಲಿಸಿದ್ದಾರೆ. ಮೂರನೆಯ ಸಾರಿ ಗೆಲ್ಲಿಸುತ್ತಾರೆ. ಈ ರಾಜ್ಯದ ಮುಖ್ಯಮಂತ್ರಿಯಾದರೂ ಆಗಬಹುದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ವಿರೂಪಾಕ್ಷಪ್ಪನವರೇ, ತಮ್ಮ ಪ್ರಶ್ನೆ ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಆ ಅಪಾಯ ಕೂಡ ಇದೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು ಹೇಳುತ್ತಾರೆ, ಆ ಅಪಾಯ ವಿದೆಯೆಂದು.

ಶ್ರೀ ವಾಟಾಳ್‌ನಾಗರಾಜ್ : ಹೋದ ಚುನಾವಣೆಯಲ್ಲಿ ಆ ಪಕ್ಷದವರು ಇಬ್ಬರು ಗೆದ್ದಿದ್ದವರು ಈವತ್ತು ಮುಖ್ಯಮಂತ್ರಿಗಳಾಗಿದ್ದಾರೆ. ನಾನು ಏಕೆ ಆಗಬಾರದು?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಹಾಗಾದರೆ ನಿಮ್ಮ ಗೌರ್ನಮೆಂಟ್ ಬರುವುದು ಯಾವಾಗ?

ಶ್ರೀ ವಾಟಾಳ್‌ನಾಗರಾಜ್ : ನಾನು ಮುಖ್ಯಮಂತ್ರಿಯಾದರೆ ಮಾನ್ಯ ನಾಣಯ್ಯನವರನ್ನು ಉಪಮುಂತ್ರಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ.

ಅಧ್ಯಕ್ಷರು : ಅಂದರೆ ಪಟೇಲರಿಗೆ ಎಲ್ಲಿ ಜಾಗ?

ಶ್ರೀ ವಾಟಾಳ್‌ನಾಗರಾಜ್: ಅವರು ದೊಡ್ಡವರು, ಅವರು ನಮಗೆ ಆಶೀರ್ವಾದ ಮಾಡಿಕೊಂಡು ಇರಲಿ.

ವಿಷಯ : ಸಿಂಧನೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 207(1094)

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಸಿಂಧನೂರು ನಗರದ ಕುಡಿಯುವ ನೀರನ ಪೂರ್ಯೆಕೆ ಸರಿಯಾಗಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ನಗರದ ನೀರು ಪೂರ್ಯೆಕೆ ಯೋಜನೆ ಯಾವ ಹಂತದಲ್ಲಿದೆ, ಯಾವಾಗ ಪೂರ್ಣಗೊಳ್ಳುವುದು.

ಇ. ಈ ಮಧ್ಯೆ ಪ್ರಾರಂಭಿಸಿರುವ ಕೆಲಸ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಬೇಸಿಗೆ ಪ್ರಾರಂಭಗೊಂಡಿರುವುದರಿಂದ ಜನೆವರಿಗೆ ನೀರಿನ ತೊಂದರೆ ನಿವಾರಣೆಗ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ. ಹೌದು.

ಆ. ಈ ಯೋಜನೆಯು ಪ್ರಗತಿಯಲ್ಲಿದ್ದು ಮೇ 1996ರ ಕೊನೆಗೆ ಪೂರ್ತಿಗೊಳಿಸಲು ನಿಯೋಜಿಸಲಾಗಿದೆ.

ಇ. ಈಗಾಗಲೇ ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ ಕಳಪೆ ಕೆಲಸ ಮಾಡಿರುವುದು ಕಂಡು ಬಂದಿಲ್ಲ.

ಈ. ಒಂದು ಕಿರುಬಾವಿಯನ್ನು ಹೀರೆ ಹಳ್ಳದಲ್ಲಿ ಹಾಕಲಾಗಿದೆ. ಅದಕ್ಕೆ ಪಂಪು ಜೋಡಿಸಿ ಕೊಳವೆ ಮಾರ್ಗಗಳಿಂದ ಕುಡಿಯುವ ನೀರನ್ನು ಪೂರೈಸಲು ಕ್ರಮ ಕೈಗೊಂಡಿದೆ. ಪಟ್ಟಣದಲ್ಲಿ ಕೊಳವೆ ಬಾವಿಗಳನ್ನು ಕೊರೆದರೆ ನೀರಿನಲ್ಲಿ ಉಪ್ಪಿನಂಶ ಇರುವುದರಿಂದ ಕೊಳವೆ, ಬಾವಿಯನ್ನು ಕೊರೆಯಲು ಹೆಚ್ಚು ಸೂಕ್ತವಲ್ಲದ್ದರಿಂದ ತೊಂದರೆಯಾದ ಸ್ಥಳಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಪುರಸಭೆ ವತಿಯಿಂದ ಸೂಕ್ತ ಕ್ರಮ ಮಾಡಲು ಪುರಸಭೆ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಕೆ. ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೇ, ಸಿಂಧನೂರು ನಗರದ ಕುಡಿಯುವ ನೀರಿನ ತೊಂದರೆಯನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ ಅಲ್ಲಿ ಪ್ರಾರಂಭಿಸಿರುವ ಯೋಜನೆ ಏನಿದೆ ಅದು 1996ರಲ್ಲಿ ನಾವು ಕೊನೆಗೊಳಿಸುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಈ ಯೋಜನೆ ಪ್ರಾರಂಭವಾಗಿ 5 ವರ್ಷ ಕಳೆಯುತ್ತಾ ಬಂತು. ಈ ಯೋಜನೆಗೆ ತುಂಗಭದ್ರ ಎಡದಂಡೆ ಕಾಲುವೆಯಿಂದ ನೀರನ್ನು ಪೈಪು ಮೂಲಕ ತರಬೇಕಾಗಿರುವುದರಿಂದ ಆ ಪೈಪುಲೈನ್ ಇನ್ನು 5 ಕಿಲೋಮೀಟರ್‌ವರೆಗೂ ಕೂಡ ಮಾಡಲಿಲ್ಲ. 15 ಕಿಲೋಮೀಟರ್ ಪೈಪ್‌ಲೈನ್ ಆಗ ಬೇಕಾಗಿದೆ. ಮುಖ್ಯವಾಗಿ ಪೈಪಿನ ಪೂರೈಕೆ ಇಲ್ಲ. ಏಕೆ ಪೂರೈಕೆಯಾಗುತ್ತಿಲ್ಲವೆಂದರೆ ಸರ್ಕಾರದಿಂದ ಬೇಕಾಗಿರತಕ್ಕ ಎಲ್‌ಓಸಿ ಸರಿಯಾಗಿ ಬಿಡುಗಡೆಯಾಗುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಸರ್ಕಾರ ತೀವ್ರ ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಎರಡನೆಯದಾಗಿ ಈ ಯೋಜನೆಯಲ್ಲಿ ಕೆರೆ ನಿರ್ಮಿಸತಕ್ಕ ಕೆಲಸ ಬಹಳಷ್ಟು ಕಳಪೆಮಟ್ಟದ್ದು ಆಗಿದೆ ಎನ್ನತಕ್ಕ ವಿಚಾರ.

ಅದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಒಂದು ಕೆರೆ ಕೆಲಸ ಗುತ್ತಿಗೆ ಹಿಡಿಯತಕ್ಕಂಥ ಗುತ್ತಿಗೆದಾರರು ಒಬ್ಬ ಸಬ್ ಕಂಟ್ರಾಕ್ಟರ್ ಕೊಟ್ಟು ಬಹಳಷ್ಟು ಕಳಪೆ ಮಟ್ಟದ ಕೆಲಸ ಮಾಡಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂದಿದೆ.

ಆದಕಾರಣ ಸರ್ಕಾರ ಇದರ ಬಗ್ಗೆ ತನಿಕೆ ಮಾಡಿ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಮನವಿಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ನೀವು ಭಾಷಣ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ವಿರೂಪಾಕ್ಷಪ್ಪ : ಈಗ ಬೇಸಿಗೆ ಪ್ರಾರಂಭವಾಗಿರುವುದರಿಂದ ತುಂಬಾ ತೊಂದರೆಯಾಗುತ್ತಿದೆ. ಅದಕ್ಕೆ ಒಂದು ಕಿರಿಬಾವಿಯನ್ನು ತೆಗೆದು ನೀರನ್ನು ಹೊರತೆಗೆಯತಕ್ಕಂಥ ಕೆಲಸ ಮಾಡಿದ್ದೇವೆ ಎಂದು ಮಾನ್ಯ ಮುಂತ್ರಿಗಳು ಹೇಳಿದ್ದಾರೆ. ಒಂದು ಕಿರುಬಾವಿಯಿಂದ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಆದಕಾರಣ ಇನ್ನೂ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಿ ಹೆಚ್ಚಿನ ಕಿರುಬಾವಿಗಳನ್ನು ತೆಗೆದು ಅನುಕೂಲವನ್ನು ಪೂರೈಸಬೇಕೆಂದು ನಾನು ತಮ್ಮ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗ ಪ್ರಗತಿಯಲ್ಲಿರುವ ಕಾಮಗಾರಿಗಳು ಕಳಪೆದರ್ಜೆಯವು ಎಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರು ಮಾಡುವ ಅಲಿಗೇಷನ್ ನಿರ್ದಿಷ್ಟವಾಗಿದ್ದರೆ ಸರ್ಕಾರ ಯಾವ ರೀತಿ ಬೇಕಾದರೂ ಅದರ ಬಗ್ಗೆ ವಿಚಾರಣೆ ಮಾಡುವುದಕ್ಕೆ, ಎನ್‌ಕ್ವೈರಿ ಮಾಡುವುದಕ್ಕೆ ಸಿದ್ಧವಿದ್ದೇ. ಅದು ಕಳಪೆ ಇದ್ದರೆ ಯಾರ್ಯಾರು ಸಂಬಂಧಪಟ್ಟವರು ಇದ್ದಾರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆಯೆಂದು ನಾನು ಈ ಸಂದರ್ಭದಲ್ಲಿ ಆಶ್ವಾಸನೆಯನ್ನು ಕೊಡುತ್ತಿದ್ದೇನೆ. ಬೇರೆ ತೊರೆಬಾವಿಗಳ ಅವಶ್ಯಕತೆ ಹೆಚ್ಚು ಇದ್ದರೆ ಅದರ ಬಗ್ಗೆ ವಿಚಾರ ಮಾಡುವುದಕ್ಕೆ ನಾವು ತಯಾರಿದ್ದೇವೆ. ಕುಡಿಯುವ ನೀರಿನ ಸಲುವಾಗಿ ಕೊಳವೆ ಕಿರುಬಾವಿ ಅಥವಾ ಟ್ಯಾಂಕರ್ ಮೂಲಕ ಯಾವುದೇ ರೀತಿಯಿಂದ ನೀರಿನ ಸರಬರಾಜು ಮಾಡುವುದಕ್ಕೆ ಸರ್ಕಾರ ಸಿದ್ದವಿದೆಯೆಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಕೆ. ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಸಿಂಧನೂರು ನಗರಕ್ಕೆ ಕುಡಿಯುವುದಕ್ಕೆ ನೀರು ತುಂಗಭದ್ರಾ ಎಡದಂಡೆ ಕಾಲುವೆಯನ್ನು ಅವಲಂಭಿಸಿರುವುದರಿಂದ ಇದೇ ಏಪ್ರಿಲ್ 8ಕ್ಕೆ ತುಂಗಭದ್ರಾ ಕಾಲುವೆಯನ್ನು ಮುಚ್ಚುವುದರಿಂದ ನಮಗೆ ಬಹಳಷ್ಟು ತೊಂದರೆಯಾಗುತ್ತದೆ. ಆದಕಾರಣ ಬೇಸಿಗೆಯಲ್ಲಿ ಬಹಳ ತೊಂದರೆಯನ್ನು ನಾವು ಸಿಂಧನೂರಿನ ಜನ ಅನುಭವಿಸಬೇಕಾಗುತ್ತದೆ. ಆದ್ದರಿಂದ ಹೆಚ್ಚು ಕಿರುಬಾವಿಗಳನ್ನು ಕೊರೆಯಬೇಕೆಂದು ಮತ್ತು ಹೆಚ್ಚು ನೀರನ್ನು ಒದಗಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಕೂಡಲೇ ಹೆಚ್ಚಿನ ಬಾವಿಗಳನ್ನು ಕೂಡ ತೊಡಲು ಸರ್ಕಾರ ಸಿದ್ಧವಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ವಿಷಯ : ಶಿರಾ ಪಟ್ಟಣಕ್ಕೆ ಕುಡಿಯುವ ನೀರಿನ ಕೊರತೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 208 (1286)

ಶ್ರೀ ಬಿ. ಸತ್ಯನಾರಾಯಣ (ಶಿರಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಶಿರಾ ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದರಿಂದ ಪಟ್ಟಣದ ಜನ ರಸ್ತೆತಡೆ ಮಾಡಿ ಬೀದಿಗೆ ಇಳಿದು ಪ್ರತಿಭಟನೆ ಮಾಡಿರುವ ವಿಚಾರ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಇ. ಶಿರಾ ಪಟ್ಟಣಕ್ಕೆ ಶಾಶ್ವತವಾಗಿ ಕುಡಿಯುವ ನೀರು ಒದಗಿಸಲು ಯಾವುದಾದರೂ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಈ. ಹಾಗಿದ್ದಲ್ಲಿ ಅದರ ವಿವರ ನೀಡುವುದು.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ. ಹೌದು

ಆ. ಕುಡಿಯುವ ನೀರಿನ ತೊಂದರೆ ನಿವಾರಿಸಲು ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.